

ಗರಗ ಕ್ಷೇತ್ರೀಯ ಸೇವಾ ಸಂಘದಲ್ಲಿ ಸಿದ್ಧವಾಗುತ್ತಿರುವ ರಾಷ್ಟ್ರಧ್ವಜ

## ಬೆಂಗೇರಿಯಲ್ಲಿ ಲಭ್ಯವಿರುವ ಬಗೆಬಗೆ ಅಳತೆಯ ರಾಷ್ಟ್ರಧ್ವಜಗಳು

| ಅಳತೆ (ಅಡಿಗಳಲ್ಲಿ) | ಅಳತೆ (ಮಿಲಿಮೀಟರ್‌ಗಳಲ್ಲಿ) | ದರ( ಗಳಲ್ಲಿ) |
|---|---|---|
| 21x14 | 6300x4200 | 30,150 |
| 12x8 | 3600x2400 | 9,850 |
| 9x6 | 2700x1800 | 6,325 |
| 6x4 | 1800x200 | 3,040 |
| 4(1/2)x3 | 1350x900 | 1975 |
| 3x2 | 900x600 | 1,080 |
| 1(1/2)x1 | 450x300 | 450 |
| 9x6(ಇಂಚು) | 225x150 (ಕಾರು ಧ್ವಜ) | 250 |
| 6x4(ಇಂಚು) | 150x100 (ಟೇಬಲ್ ಧ್ವಜ) | 345 |

## ಗರಗ ಕ್ಷೇತ್ರೀಯ ಸೇವಾ ಸಂಘ

ಧಾರವಾಡದಿಂದ 15 ಕಿ.ಮೀ. ದೂರದಲ್ಲಿರುವ ಗರಗ ಎಂಬ ಪುಟ್ಟ ಗ್ರಾಮದಲ್ಲಿ 1956ರಲ್ಲಿ ಅಸ್ತಿತ್ವಕ್ಕೆ ಬಂದ ಗರಗ ಕ್ಷೇತ್ರೀಯ ಸೇವಾ ಸಂಘವು ಖಾದಿ ಬಟ್ಟೆ ಉತ್ಪಾದನಾ ಕಾರ್ಯದಲ್ಲಿ ತೊಡಗಿತು. ಗ್ರಾಮದ ಪ್ರಮುಖರಾದ ಶಂಕ್ರಪ್ಪ ಕರಡಿಗುಡ್ಡ, ಶಂಕರರಾವ ಕುರ್ತಕೋಟಿ, ಶಂಕರ ಮುಗಳಿ ಅವರ ಆಸಕ್ತಿ ಮತ್ತು ಒತ್ತಾಸೆಯೊಂದಿಗೆ 1974ರಲ್ಲಿ ಸಂಘವು ರಾಷ್ಟ್ರಧ್ವಜಕ್ಕೆ ಬಟ್ಟೆಯನ್ನು ಸಿದ್ಧಪಡಿಸತೊಡಗಿತು.

ಖಾದಿ ನೂಲುವುದು, ಗಂಜಿ ಮಾಡುವುದು, ನೇಯ್ಗೆ ಮಾಡುವುದು ಸೇರಿ ಎಲ್ಲವನ್ನೂ ಜೋಪಾನವಾಗಿ ನಿಭಾಯಿಸಿ ಮುಂಬೈಯೊಂದರ ಸಂಸ್ಥೆ ಮೂಲಕ ಇಡೀ ದೇಶಕ್ಕೆ ರಾಷ್ಟ್ರಧ್ವಜ ವಿತರಿಸುತ್ತಿತ್ತು. ಮುಂಬೈ ಸಂಸ್ಥೆಯ ಗೊಡವೆಯೇ ಬೇಡವೆಂದು ಈಗ ಸಂಘದವರೇ ಕಳೆದ ವರ್ಷದಿಂದ ರಾಷ್ಟ್ರಧ್ವಜ ಸಿದ್ಧಪಡಿಸಿ, ಇಡೀ ದೇಶಕ್ಕೆ ರವಾನಿಸುತ್ತಿದ್ದಾರೆ.

‘ರಾಷ್ಟ್ರಧ್ವಜ ಖಾದಿಯೆಂದರೆ ಸುಮ್ಮನೆ ಅಲ್ಲ. ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ಆಗುತ್ತದೆ. ಭಾರತೀಯ ಮಾನದಂಡಗಳ ಬ್ಯುರೊ (ಬಿಐಎಸ್) ಪ್ರಕಾರವೇ ಖಾದಿ ಬಟ್ಟೆ ಆಗಿರಬೇಕು. ಚೂರು ಆಸುಪಾಸು ಆಗುವಂತಿಲ್ಲ. ಗುಣಮಟ್ಟದಲ್ಲಿ ಸಣ್ಣಪುಟ್ಟ ಲೋಪದೋಷವಾದರೂ ಖಾದಿ ಬಟ್ಟೆಯನ್ನು ತಿರಸ್ಕರಿಸಲಾಗುತ್ತದೆ. ಹೀಗಾಗಿ ಖಾದಿ ಬಟ್ಟೆ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸುತ್ತೇವೆ’ ಎಂದು ಧಾರವಾಡ ತಾಲ್ಲೂಕು ಗರಗ ಕ್ಷೇತ್ರೀಯ ಸೇವಾ ಸಂಘದ ಅಧ್ಯಕ್ಷ ಈಶ್ವರಪ್ಪ ಈಟಗಿ ಹೇಳುತ್ತಾರೆ.

ರಾಜ್ಯ ಸರ್ಕಾರದಿಂದ 2023ರ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಪಾತ್ರವಾಗಿರುವ ಈ ಸಂಘವು ಈಗಲೂ ತನ್ನ ಛಾಪನ್ನು ಯಥಾರೀತಿ ಉಳಿಸಿಕೊಂಡಿದೆ. ಆಧುನಿಕತೆಗೆ ಮಾರುಹೋಗದೇ ಮತ್ತು ಅದರ ಲವಲೇಶವನ್ನು ಸ್ವಲ್ಪವೂ ತಾಕಿಸಿಕೊಳ್ಳದೇ, ಚರಕ ಮತ್ತು ಸಾಂಪ್ರದಾಯಿಕ ಮಾದರಿಯಲ್ಲೇ ಖಾದಿ ವಸ್ತ್ರವನ್ನು ಸಿದ್ಧಪಡಿಸುತ್ತಿದೆ. ಸಂಘದ ಹಳೆಯ ಕಚೇರಿಯಲ್ಲಿ ಈಗಲೂ ಕುರ್ಚಿ ಮತ್ತು ಮೇಜಿಲ್ಲ. ಅಧ್ಯಕ್ಷರಾದಿಯಾಗಿ ಎಲ್ಲರೂ ಕೆಳಗಡೆ ಕೂತುಕೊಂಡೇ ಸಭೆ ನಡೆಸುತ್ತಾರೆ.

‘ಖಾದಿ ಎಂದರೆ ಶ್ರಮ, ಮೈಯಲ್ಲಿ ಬೆವರು ಬಂದಾಗಲೇ ದುಡಿಮೆ ಎಂಬ ಗಾಂಧೀಜಿಯವರ ತತ್ವವನ್ನು ಈಗಲೂ ತಪ್ಪದೇ ಪಾಲಿಸುತ್ತಿದ್ದೇವೆ. ಹೀಗಾಗಿ ಇಲ್ಲಿ ಆಧುನಿಕ ಯಂತ್ರಗಳಿಗೆ ಪ್ರವೇಶವಿಲ್ಲ. ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಅನುಸರಿಸಲಾಗುತ್ತಿರುವ ಪದ್ಧತಿಯನ್ನೇ ಮುಂದುವರೆಸಿದ್ದೇವೆ.



ರಾಜೇಶ ಕಲಗಾರ



ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಗೋದಾಮಿನಲ್ಲಿ ರಾಷ್ಟ್ರಧ್ವಜದ ಬಟ್ಟೆಗಳು